ಶ್ರೀ ವಿ. ಕೃಷ್ಣಪ್ಪ : ಕಾರ್ಮಿಕರು ಎರಡು - ಮೂರು ವರ್ಷಗಳ ಕಾಲ ಕೆಲಸ ಮಾಡಿದ ನಂತರ ಅವರನ್ನು ಮನೆಗೆ ಕಳುಹಿಸಿದರೆ ಅವರ ಗತಿ ಏನು? ಕೈಗಾರಿಕೆಗಳ ಸ್ಥಾಪನೆಗೊಸ್ಕರ ತಮ್ಮಲ್ಲಿರತಕ್ಕಂಥ ಎಲ್ಲಾ ಜಮೀನನ್ನು ಮಾರಾಟ ಮಾಡಿದ್ದು, ಅವರಿಗೆ ಕೆಲಸವು ಇಲ್ಲದೇ ಹೋದರೆ ಅವರೆಲ್ಲರೂ ಬೀದಿಪಾಲಾಗುತ್ತಾರೆ. ಆದ್ದರಿಂದ ಇವರ ಬಗ್ಗೆ ಸರ್ಕಾರ ಏನಾದರೂ ಯೋಚನೆ ಮಾಡಿದೆಯೆ?

ಶ್ರೀ ಎಸ್. ಆರ್. ಕಾಶಪ್ಪನವರ್ : ಕೈಗಾರಿಕಾ ಪುನಶ್ಚೇತನ ನೀತಿಯನ್ನು ರೂಪಿಸತಕ್ಕಂಥ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ. ಈ ಒಂದು ನೀತಿಯನ್ನು ಸರ್ಕಾರ ಆದಷ್ಟು ಬೇಗ ಪ್ರಕಟಿಸುತ್ತದೆ.

ಹೊಳಲ್ಕೆರೆ ಕ್ಷೇತ್ರದಲ್ಲಿ ಅಂಬೇಡ್ಕರ್ ಭವನ

262 (2472) : ಶ್ರೀ ರಮೇಶ್. ಪಿ. (ಹೊಳಲ್ಕೆರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹೊಳಲ್ಕೆರೆ ತಾಲ್ಲೂಕಿನಲ್ಲಿ ಕಳೆದ 5 ವರ್ಷಗಳಿಂದ ಅಂಬೇಡ್ಕರ್ ಭವನ ಕಟ್ಟಲು ಪ್ರಾರಂಭಿಸಲಾಗಿದ್ದು, ಅರ್ಧಕ್ಕೆ ನಿಲ್ಲಿಸಲು ಕಾರಣವೇನು?

(ಆ) ಅರ್ಧಕ್ಕೆ ನಿಲ್ಲಿಸಿದ್ದರಿಂದ ದೀನದಲಿತರಿಗೆ ತೊಂದರೆ ಮಾಡಿದಂತೆ ಆಗುತ್ತದೆ; ಯಾವಾಗ ಮುಗಿಸುತ್ತೀರಾ;

(ಇ) ಈ ಭವನದ ಕಟ್ಟಡವನ್ನು ಎಂದು ಪೂರ್ಣಗೊಳಿಸಲಾಗುವುದು;

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಸರ್ಕಾರದ ವತಿಯಿಂದ ಹೊಳಲ್ಕೆರೆ ತಾಲ್ಲೂಕಿನಲ್ಲಿ ಅಂಬೇಡ್ಕರ್ ಭವನವನ್ನು ನಿರ್ಮಾಣ ಮಾಡುವ ಕಾಮಗಾರಿಯನ್ನು ತೆಗೆದುಕೊಂಡಿರುವುದಿಲ್ಲ.

(ಆ) ಉದ್ಭವಿಸುವುದಿಲ್ಲ.

(ಇ) ಉದ್ಭವಿಸುವುದಿಲ್ಲ.

ಶ್ರೀ ಪಿ. ರಮೇಶ್ : ಸನ್ಮಾನ್ಯ ಅಧ್ಯಕ್ಷರೆ, ಹೊಳಲ್ಕೆರೆ ತಾಲ್ಲೂಕಿನಲ್ಲಿ ಸುಮಾರು 5-10 ವರ್ಷಗಳ ಹಿಂದಿನಿಂದ ಯೋಚನೆ ಮಾಡಿ ಅಂಬೇಡ್ಕರ್ ಭವನಗಳ ಕಟ್ಟಡಗಳನ್ನು ಪ್ರಾರಂಭ ಮಾಡಿ, ಪ್ರತಿ ಪಂಚಾಯತಿಯಲ್ಲಿ ಮತ್ತು ದೊಡ್ಡ ದೊಡ್ಡ ಗ್ರಾಮಗಳಲ್ಲಿ ಕಟ್ಟಡಗಳನ್ನು ಪ್ರಾರಂಭ ಮಾಡಿ ಹಾಗೆ ಬಿಟ್ಟಿದ್ದಾರೆ. ಅಲ್ಲಿನ ಯಾವುದೇ ಗ್ರಾಮಗಳಿಗೆ ನಾವು ಹೋದಾಗ ಸಾಮಾನ್ಯವಾಗಿ ಇತ್ತೀಚಿನ ದಿನಗಳಲ್ಲಿ ಅಂಬೇಡ್ಕರ್ ಭವನ ಎಂದ ತಕ್ಷಣ ಇವತ್ತಿನ ಎಲ್ಲಾ ವಾತಾವರಣದಲ್ಲಿ ಸಾರ್ವಜನಿಕರಿಗೆ ಎನ್ನುವ ಅರ್ಥವಿದ್ದರೂ ದೀನದಲಿತರಲ್ಲಿ ಒಂದು ಸಮುದಾಯ ಭವನದ ತರಹ ಇರುತ್ತದೆ. ಸಣ್ಣಪುಟ್ಟ ಮನೆ ಅಥವಾ ಗುಡಿಸಲುಗಳಲ್ಲಿ ವಾಸ ಮಾಡತಕ್ಕಂಥ ಜನಗಳಿಗೆ ಯಾವುದಾದರೂ ಒಂದು ಕಾರ್ಯಕ್ರಮವನ್ನು ಮಾಡುವುದಕ್ಕೆ ಇರುತ್ತದೆ ಎನ್ನತಕ್ಕಂಥ ಆಸೆಯನ್ನು ಜನ ಇಟ್ಟುಕೊಂಡಿರುತ್ತಾರೆ. ಕನಿಷ್ಟ 10-15 ವರ್ಷಗಳಾದರೂ ಆ ಬೆಡ್ ಹಾಕಿದ್ದರೆ ಮೇಲೆ

ಜಾಲಿಮರ, ಕಳ್ಳಿ ಏನೇಲ್ಲಾ ಬೆಳೆದದ್ದನ್ನು ನಾನು ಮೊನ್ನೆ ರೌಂಡ್ಸಿಗೆ ಹೋದಾಗ ಜನರು ತೋರಿಸಿ ನನ್ನನ್ನು ಪ್ರಶ್ನೆ ಮಾಡಿದರು. ದಯಮಾಡಿ ಏನಾದರೂ ಮಾಡಿ ಇದನ್ನು ಪೂರ್ತಿಯಾಗಿ ಕಟ್ಟಿ ಸಮಸ್ಯೆಯನ್ನು ಬಗೆಹರಿಸಬೇಕು. ನಮಗೆ ದೊಡ್ಡ ದೊಡ್ಡ ಕಲ್ಯಾಣ ಮಂಟಪಗಳಿಗೆ ಹೋಗುವುದಕ್ಕಾಗುವುದಿಲ್ಲ, ಸಭೆ ಸಮಾರಂಭಗಳನ್ನು ಮಾಡಿದರೆ ಕುಳಿತು ಚರ್ಚೆ ಮಾಡುವುದಕ್ಕಾಗುವುದಿಲ್ಲ, ಬೇರೆ ಬೇರೆ ದೇವಸ್ಥಾನಗಳಲ್ಲಿ ಕುಳಿತು ನಮಗೆ ಚರ್ಚೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಮಾನ್ಯ ಸಚಿವರು ತಿಳಿಸಿರುವ ಉತ್ತರದಲ್ಲಿ ಅಂಬೇಡ್ಕರ್ ಭವನಗಳ ಕಾಮಗಾರಿಗಳನ್ನು ಕೈಗೊಂಡಿಲ್ಲವೆಂದು ಹೇಳುತ್ತಿದ್ದಾರೆ. ಇನ್ನೊಂದು ಪ್ರಶ್ನೆಯಲ್ಲಿ, ಈ ಅಂಬೇಡ್ಕರ್ ಭವನಗಳನ್ನು ಪೂರ್ತಿಗೊಳಿಸುವಂಥ ವಾತಾವರಣ ಉದ್ಭವಿಸುವುದಿಲ್ಲವೆಂದು ಹೇಳುತ್ತಿದ್ದಾರೆ. ಕನಿಷ್ಟ 10 ವರ್ಷಗಳಿಂದ ನಮ್ಮ ತಾಲ್ಲೂಕಿನಲ್ಲಿ 22 ಅಂಬೇಡ್ಕರ್ ಭವನದ ಕಟ್ಟಡಗಳಿಗೆ ಬೆಡ್ ಹಾಕಿ ಬಿಟ್ಟಿದ್ದಾರೆ, ಪ್ರತಿ ಕಟ್ಟಡಕ್ಕೆ 25-30 ಸಾವಿರ ರೂಪಾಯಿಗಳು ಖರ್ಚಾಗಿರುತ್ತದೆ. ಇದರ ಬಗ್ಗೆ ನಾನು ಪ್ರತಿ ತಿಂಗಳ ಇಎಸ್‌ಪಿ ಹಾಗೂ ಜಿಲ್ಲಾ ಪಂಚಾಯತಿ ಸಭೆಯಲ್ಲಿ ಅಧಿಕಾರಿಗಳೊಂದಿಗೆ ಚರ್ಚೆ ಮಾಡುತ್ತಿರುತ್ತೇನೆ. ಮಾನ್ಯ ಸಚಿವರು ಕಳುಹಿಸಿರುವ ಉತ್ತರವನ್ನು ನೋಡಿದರೆ ಆ ಕಟ್ಟಡಗಳ ಗೋಡೆಗಳ ಮೇಲೆ ಜಾಲಿಗಿಡಗಳು ಏನು ಬೆಳೆದಿದೆ, ಅದು ಮುಂದುವರಿಯಬೇಕೇ? ಆ ಜನರ ಭಾವನೆಗಳಿಗೆ ಅನುಗುಣವಾಗಿ, ದಯಮಾಡಿ ತಾವು ಬೇಗ ಆ ಕಟ್ಟಡಗಳನ್ನು ಕಟ್ಟಿ ಮುಗಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಈ ಅಂಬೇಡ್ಕರ್ ಭವನಗಳನ್ನು ಇಲಾಖೆಯಿಂದ ಮಾಡಿರುವುದಿಲ್ಲ. ಯಾರು ಕಟ್ಟಿದ್ದಾರೆ, ಇವುಗಳನ್ನು ಯಾರು ಪ್ರಾರಂಭ ಮಾಡಿದ್ದಾರೆ ಎನ್ನುವುದಕ್ಕೆ ನಮ್ಮ ಹತ್ತಿರ ಮಾಹಿತಿ ಇರುವುದಿಲ್ಲ. ನಮಗಿಂತ ಮಾನ್ಯ ಸದಸ್ಯರಿಗೆ ಇದು ಹೆಚ್ಚಾಗಿ ಗೊತ್ತಿರುತ್ತದೆ, ಏಕೆಂದರೆ ಅವರು ತಾಲ್ಲೂಕು ಪಂಚಾಯಿತಿ ಸದಸ್ಯರಿರುತ್ತಾರೆ, ಜಿಲ್ಲಾ ಪಂಚಾಯಿತಿಯಲ್ಲಿ ಸದಸ್ಯರಿರುತ್ತಾರೆ, ಅವುಗಳನ್ನು ತಾಲ್ಲೂಕ್ ಪಂಚಾಯಿತಿಯಿಂದ ಕಟ್ಟಿದ್ದಾರೋ ಜಿಲ್ಲಾ ಪಂಚಾಯಿತಿಂದುಂದ ಕಟ್ಟಿದ್ದಾರೋ ಅದನ್ನು ಅವರೇ ಪರಾಮರ್ಶೆ ಮಾಡಬೇಕು. ನಮ್ಮ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕಿನ ಪಂಚಾಯಿತಿಯಲ್ಲಿ ಶೇಕಡಾ 18 ರಷ್ಟು ಹಣ ಈ ವಿಶೇಷ ಘಟಕ ಯೋಜನೆಗಾಗಿ ಇದೆ. ಮಾನ್ಯ ಸದಸ್ಯರು ಪ್ರಯತ್ನ ಪಟ್ಟರೆ 10ಹಾಗೂ 5 ಸಾವಿರ ರೂಪಾಯಿಗಳನ್ನು ಕೊಟ್ಟು ಆ ಅಂಬೇಡ್ಕರ್ ಭವನಗಳನ್ನು ಪೂರ್ತಿಗೊಳಿಸುವುದಕ್ಕೆ ಸಾಧ್ಯವಿದೆ. ನಮ್ಮ ಸರ್ಕಾರದ ವತಿಯಿಂದ ಪ್ರತಿ ತಾಲ್ಲೂಕಿಗೊಂದು ಕೊಡಬೇಕೆಂದು ಹಿಂದೆ ತೀರ್ಮಾನವಾಗಿದೆ. ಆ ಪ್ರಕಾರವಾಗಿ ತೆಗೆದುಕೊಂಡ ಕಾರ್ಯಕ್ರಮಗಳು ಇದ್ದರೆ ಅವುಗಳನ್ನು ನಾವು ಪೂರ್ತಿ ಮಾಡುತ್ತೇವೆ. ಅವರ ತಾಲ್ಲೂಕಿಗೆ ಹಿಂದೆ ಕೊಡದೆ ಹೋಗಿದ್ದರೆ ಹೊಸದಾಗಿ ಕೊಡುವ ಸಂದರ್ಭದಲ್ಲಿ ನಾನು ಪ್ರಾಶಸ್ತ್ಯ ಕೊಟ್ಟು ಒಂದನ್ನು ಮಂಜೂರು ಮಾಡುತ್ತೇನೆ.

ಶ್ರೀ ಪಿ. ರಮೇಶ. : ತಾಲ್ಲೂಕ್ ಹೆಡ್ ಕ್ವಾರ್ಟರ್ಸ್‌ನಲ್ಲಿ ಕಟ್ಟಿದ್ದವು ಆಗಿದ್ದರೂ ಸಹ ಇವು ಜಿಲ್ಲಾ ಪಂಚಾಯಿತಿಯಿಂದ ಪ್ರಾರಂಭವಾಗುತ್ತದೆ. ಸರ್ಕಾರದಿಂದ ಇದರ ಬಗ್ಗೆ ಒಂದು ಆದೇಶ ಕಳುಹಿಸಿದರೆ ಆ ಅಧಿಕಾರಿಗಳು ಬೇಗ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ : ತಾಲ್ಲೂಕಿನಲ್ಲಿ ಯಾವುದಾದರೊಂದನ್ನು ಪೂರ್ತಿಗೊಳಿಸುವುದಕ್ಕೆ ತಾವು ಬರೆದು ಕೊಟ್ಟರೆ, ಅದಕ್ಕೆ ಬೇಕಾದ ಉಳಿದ ಹಣವನ್ನು ನಾನು ಕೊಡುತ್ತೇನೆ.

ಧಾರವಾಡ ವಿಧಾನ ಸಭಾ ಕ್ಷೇತ್ರದಲ್ಲಿ ಕೊರೆಯಿಸಲಾದ ಕೊಳವೆ ಬಾವಿಗಳ ಸಂಖ್ಯೆ

264 (2468) : ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಧಾರವಾಡ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೊರೆಯಿಸಲಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

(ವರ್ಷಾವಾರು ವಿವರ ಒದಗಿಸುವುದು)

(ಆ) ಅವುಗಳ ಪೈಕಿ ನೀರು ದೊರಕದಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು? ವಿಫಲಗೊಂಡ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

(ಅ) 78

ವರ್ಷಾವಾರು ವಿವರ

1.	1997-98	11
2.	1998-99	43
3.	1999-2000	24
	ಒಟ್ಟು	78

(ಆ) 77

ವಿಫಲಗೊಂಡ ಕೊಳವೆ ಬಾವಿ 01

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ನಗರಾಭಿವೃದ್ಧಿ ಸಚಿವರಿಗೆ ನನ್ನ ಧಾರವಾಡ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೊರೆಯಿಸಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದೇನೆ. ಇದಲ್ಲದೆ ಇದಕ್ಕೆ ಸರಿಯಾದ ವರ್ಷಾವಾರು ವಿವರಗಳನ್ನು ಕೊಡಿ ಎಂದು ಕೇಳಿದ್ದೇನೆ. ಅವರು ಬರೀ ಸಂಖ್ಯೆಯನ್ನು